# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಜೆ. ರಾಮಮೂರ್ತಿ,ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಚಿಂಚೋಳಿ, ಇವರ ವಿರುದ್ಧ ಕರ್ತವ್ಯ ಚ್ಯುತಿ ಆರೋಪ - ಶಿಸ್ತು ಕ್ರಮ.

ಓದಲಾಗಿದೆ.

(1) ಪ್ರಧಾನ ಸಿವಿಲ್ ಜಡ್ಜ (ಜ್ಯೂನಿಯರ ಡಿವಿಜನ್), ಜೆ.ಎಮ್.ಎಫ್. ಸಿ. ಚಿಂಚೋಳಿಇಲ್ಲಿ ಎಲೆಕ್ಷನ ಪಿಟಿಶನ್ 1/2003 ರಲ್ಲಿಯ ತೀರ್ಪು ದಿನಾಂಕ: 19-11-2003.

(2) ಕೃಷಿ ಆಯುಕ್ತರ ಕಾರಣ ಕೇಳುವ ಪತ್ರ ಸಂ. ಸಿಬ್ಬಂದಿ-1/ವಿಚಾರಣೆ-7/10/2003-04, ದಿನಾಂಕ: 04-05-2010.

(3) ಶ್ರೀ ಜೆ. ರಾಮಮೂರ್ತಿ,ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಚಿಂಚೋಳಿ, ಇವರ ಹೇಳಿಕೆ ದಿನಾಂಕ: ಇಲ್ಲಾ.

ಪ್ರಸ್ತಾವನೆ:-

ಶ್ರೀ ಜೆ. ರಾಮಮೂರ್ತಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಉಪ ಕೃಷಿ ನಿರ್ದೇಶಕರ ಕಚೇರಿ, ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ಗಂಗಾವತಿ ಇವರು ಹಿಂದೆ ಸಹಾಯಕ ಕೃಷಿ ನಿರ್ದೇಶಕರಾಗಿ, ಚಿಂಚೋಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಸುಲೇಪೇಟೆ ಗ್ರಾಮಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಗಾಗಿ ಇವರನ್ನು ಚುನಾವಣಾಧಿಕಾರಿಯಾಗಿ ನೇಮಿಸಿದ್ದು, ದಿನಾಂಕ: 23-12-2002ರಂದು ಚುನಾವಣೆ ನಡೆಸಿರುತ್ತಾರೆ. ಈ ಚುನಾವಣೆಯಲ್ಲಿ 15 ಮತಗಳಿದ್ದು, ಶ್ರೀಮತಿ ಜಗದೇವಿ ಇವರಿಗೆ 9 ಮತಗಳು ಬಂದಿದ್ದು, ಮತ್ತೊಬ್ಬರಾದ ಶ್ರೀಮತಿ ನಾಗಮ್ಮನವರಿಗೆ 6 ಮತಗಳು ಬಂದಿರುತ್ತವೆ. ಇದನ್ನು ನಿಗದಿತ ವಹಿಯಲ್ಲಿ ದಾಖಲಿಸದೇ, ಫಲಿತಾಂಶವನ್ನು ಪ್ರಕಟಿಸದೇ, ಏಕಪಕ್ಷಿಯವಾಗಿ ಮುಂದೂಡಿರುತ್ತಾರೆಂದು, ಈ ಆರೋಪದ ವಿರುದ್ಧ ಶ್ರೀಮತಿ ಜಗದೇವಿ, ಇವರು ಪ್ರಧಾನ ಸಿವಿಲ್ ಜಡ್ಜ (ಜ್ಯೂನಿಯರ ಡಿವಿಜನ್), ಜೆ.ಎಮ್.ಎಫ್. ಸಿ. ಚಿಂಚೋಳಿ ಇಲ್ಲಿ ಎಲೆಕ್ಷನ ಪಿಟಿಶನ್ ನಂ. 1/2003ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ನ್ಯಾಯಾಲಯದ ಆದೇಶದಲ್ಲಿ ಸದರಿಯವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳುವಂತೆ ಮೇಲ್ ಕ್ರ.ಸಂ.(1)ರಲ್ಲಿ ಓದಲಾದ ತೀರ್ಪಿನಲ್ಲಿ ಆದೇಶಿಸಲಾಗಿರುತ್ತದೆ.

ಕ್ರ.ಸಂ.(2)ರಲ್ಲಿ ಓದಲಾದ ಕೃಷಿ ಆಯುಕ್ತರ ದಿನಾಂಕ: 04-05-2010ರ ಕಾರಣ ಕೇಳುವ ಪತ್ರದಲ್ಲಿ, ಕೆ.ಸಿ.ಎಸ್. (ಸಿ.ಸಿ.ಎ.) ನಿಯಮ 12ರನ್ವಯ ಸದರಿಯವರಿಗೆ ಅನುಬಂಧ-1ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿ, ಸದರಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಯಿತು.

ಈ ಮಧ್ಯೆ ಶ್ರೀ ಜೆ. ರಾಮಮೂರ್ತಿ, ಸಹಾಯಕ ಕೃಷಿ ನಿರ್ದೇಶಕರು, ಜೆ.ಎಮ್.ಎಫ್.ಸಿ. ನ್ಯಾಯಾಲಯ ನೀಡಿದ ಆದೇಶದ ವಿರುದ್ಧ, ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ಸಂ. 633/2004ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಆದೇಶದ ವಿರುದ್ಧ ತಡೆಯಾಜ್ಞೆ ತಂದಿರುವುದಾಗಿಯೂ ನಂತರ ವಿಚಾರಣಾ ಹಂತದಲ್ಲಿ ಸದರಿ ರಿಟ್ ಪಿಟಿಶನ್‌ನ್ನು ವಾಪಾಸು ಪಡೆದಿರುವುದಾಗಿ ಅಧಿಕಾರಿಯವರು ತಡವಾಗಿ ಆರೋಪಿತ ಅಧಿಕಾರಿಯವರು ಇಲಾಖೆಗೆ ಸಲ್ಲಿಸಿರುತ್ತಾರೆಂದು ಕೃಷಿ ಆಯುಕ್ತರು ತಿಳಿಸಿರುತ್ತಾರೆ ಹಾಗೂ ಆರೋಪಿತ ಅಧಿಕಾರಿಯವರು

--2--

37

ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಾಪಾಸ್ಸು ಪಡೆದುಕೊಂಡಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುಲು ಮುಂದಿನ ಕ್ರಮ ಮುಂದುವರೆಸಲಾಯಿತು ಎಂದು ಕೃಷಿ ಆಯುಕ್ತರು ತಿಳಿಸಿರುತ್ತಾರೆ

ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಜೆ. ರಾಮಮೂರ್ತಿ, ಸಹಾಯಕ ಕೃಷಿ ನಿರ್ದೇಶಕರು, ಇವರು ಕೃಷಿ ಆಯುಕ್ತರು ನೀಡಿರುವ ಕಾರಣ ಕೇಳುವ ಸೂಚನಾ ಪತ್ರಕ್ಕೆ ಆರೋಪಿತ ಅಧಿಕಾರಿಯವರು ದಿನಾಂಕ: 06-02-2010ರಂದು ತಮ್ಮ ಲಿಖಿತ ಹೇಳಿಕೆ ಸಲ್ಲಿಸಿ, ತಮ್ಮ ಮೇಲಿರುವ ಆರೋಪವನ್ನು ಅಲ್ಲಗಳೆದಿರುತ್ತಾರೆ. ಪ್ರಧಾನ ಸಿವಿಲ್ ಜಡ್ಜ (ಜ್ಯೂನಿಯರ ಡಿವಿಜನ್), ಜೆ.ಎಮ್.ಎಫ್. ಸಿ. ಚಿಂಚೋಳಿ ಇಲ್ಲಿಯ ಎಲೆಕ್ಷನ್ ಪಿಟಿಶನ ಸಂ.1/2003ರಲ್ಲಿ ನ್ಯಾಯಾಲಯವು ನೀಡಿದ ತೀರ್ಪು, ಮತ್ತು ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿಯವರು ನೀಡಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಅವರು ಎಸಗಿರುವ ಲೋಪಕ್ಕೆ ಸಂಬಂಧಿಸಿದಂತೆ ಚುನಾವಣೆಯಂತಹ ಕಾರ್ಯಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸುವಂತೆ ಸೂಚಿಸಿ, **"ಎಚ್ಚರಿಕೆ** (Warning),, ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃಇ 76 ಕೃಪವಿ 2010.**

**ಬೆಂಗಳೂರು, ದಿನಾಂಕ: 23ನೇ ಆಗಸ್ಟ, 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಜೆ. ರಾಮಮೂರ್ತಿ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು,(ಈಗ ನಿವೃತ್ತ) ಚಿಂಚೋಳಿ,ಗುಲಬರ್ಗಾ ಜಿಲ್ಲೆ ಇವರ ಪ್ರಕರಣದಲ್ಲಿ ಆರೋಪಿತ ಅಧಿಕಾರಿಯವರು ನೀಡಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ಇನ್ನು ಮುಂದೆ ಚುನಾವಣೆಯಂತಹ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಜಾಗ್ರತೆಯಿಂದ ಕಾರ್ಯ ನಿರ್ವಹಿಸಬೇಕೆಂದು ಸೂಚಿಸಿ, **"ಎಚ್ಚರಿಕೆ (Warning),,** ನೀಡಿ ಪ್ರಕರಣವನ್ನು ಮುಕ್ತಾಯ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Manjunath 23/08/11
(ಮಂಜುನಾಥ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ), ಕರ್ನಾಟಕ, ಬೆಂಗಳೂರು.
2) ಆಯುಕ್ತರು ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಜಿಲ್ಲಾಧಿಕಾರಿಗಳು ಗುಲಬರ್ಗಾ,
4) ಸಹಾಯಕ ಕೃಷಿ ನಿರ್ದೇಶಕರು, ಚಿಂಚೋಳಿ, ಗುಲಬರ್ಗಾ, ಜಿಲ್ಲೆ.

5) ಸರ್ಕಾರಿ ಅಭಿಯೋಜಕರು, ಪ್ರಧಾನ ಸಿವಿಲ್ ಜಡ್ಜ (ಜ್ಯೂನಿಯರ ಡಿವಿಜನ್), ಜೆ.ಎಮ್.ಎಫ್. ಸಿ. ಚಿಂಚೋಳಿ, ಗುಲಬರ್ಗಾ ಜಿಲ್ಲೆ.
6) ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಅವರ ಆಪ್ತ ಕಾರ್ಯದರ್ಶಿಯವರಿಗೆ.
7) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.